ಕಾಂಟ್ರಾಕ್ಟ್ ಆಧಾರದ ಮೇಲೆ ಮಾಡಲು ಸಾಧ್ಯವೇ ಎಂಬುದನ್ನು ನಾವು ವಿಚಾರ ಮಾಡುತ್ತಿದ್ದೇವೆ. ಮಹದೇವಪ್ರಸಾದ್‌ರವರು ತಮ್ಮ ಕ್ಷೇತ್ರದಲ್ಲಿ ಫಾರಂ ಇದ ಅದನ್ನು ಏನಾದರೂ ಅಭಿವೃದ್ಧಿ ಮಾಡಿ ಎಂದು ಹೇಳಿದ್ದಾರೆ. ಆ ಕೇಂದ್ರವನ್ನು ಇಂಪ್ರೂವ್‌ಮೆಂಟ್ ಮಾಡಲು ಅಲ್ಲಿ ನೀರಿನ ಸೌಲಭ್ಯ ಮತ್ತು ಬೇರೆ ಬೇರೆ ಅನುಕೂಲತೆಗಳು ಇದ್ದಲ್ಲಿ ಅದನ್ನು ಪರಿಶೀಲನೆ ಮಾಡುತ್ತೇವೆ. ಹಿಂದೆ ಅಲ್ಲಿ ಬಿಲ್ಡಿಂಗ್‌ಗಳು ಇದ್ದುವು. ಆ ವಿಚಾರ ತಮಗೂ ಗೊತ್ತಿದೆ. ವಿಶ್ವಬ್ಯಾಂಕ್‌ನಿಂದ ಬಂದ ಹಣವನ್ನು ಇನ್‌ಫ್ರಾಸ್ಟ್ರಕ್ಚರ್‌ನ್ನು ಕ್ರಿಯೇಟ್ ಮಾಡುವುದಕ್ಕೋಸ್ಕರ ಕಟ್ಟಡಗಳ ಮೇಲೆ, ಜಪಾನ್, ಚೈನಾ ಮೆಷಿನರೀಸ್‌ಗಳ ಮೇಲೆ, ವಾಹನಗಳ ಮೇಲೆ, ಹಣವನ್ನು ಖರ್ಚು ಮಾಡಿದ್ದಾರೆ. ಅದೇ ಹಣವನ್ನು ಡೆವಲಪ್‌ಮೆಂಟ್ ಸೈಡ್ ಹಾಕದೆ ಹೀಗೆ ಖರ್ಚು ಮಾಡಿದ್ದಾರೆ. ಹೀಗೆ ಮಾಡಿದ ಇನ್‌ವೆಸ್ಟ್‌ಮೆಂಟ್‌ಗೆ ರಿಟರ್ನ್ಸ್ ಇಲ್ಲದ ಹಾಗೆ ಆಯಿತು. ಮೂಲಭೂತ ಸೌಲಭ್ಯಗಳನ್ನು ಒದಗಿಸುವ ಸದುದ್ದೇಶದಿಂದ ಹಣ ಖರ್ಚು ಮಾಡಿದ್ದರು. ಇವೊತ್ತು ನಾವು ಅದೇ ಕಟ್ಟಡಗಳನ್ನು ರಿಪೇರಿ ಮಾಡುವ ಸ್ಥಿತಿಯಲ್ಲಿಲ್ಲ. ಅದರ ಆವಶ್ಯಕತೆಯೂ ನಮಗೆ ಇಲ್ಲ. ಆ ದೃಷ್ಟಿಯಿಂದ ಎಲ್ಲೆಲ್ಲಿ ಫಾರಂಗಳಲ್ಲಿ ಕಟ್ಟಡಗಳು, ಬೇರೆ ಬೇರೆ ಸೌಕರ್ಯಗಳಿದ್ದಾವೋ ಅವುಗಳನ್ನು ಐಡಲ್ ಆಗಿ ಇಡಬಾರದೆಂಬ ಉದ್ದೇಶದಿಂದ ಅದನ್ನು ಪೈವೇಟೈಸ್ ಮಾಡಬೇಕೆಂಬ ಚಿಂತನೆಯಲ್ಲಿ ಸರಕಾರ ವಿಚಾರ ನಡೆಸಿದೆ.

ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಸಣ್ಣ ಕೈಗಾರಿಕೆ ಅಭಿವೃದ್ಧಿ

222(2480)

ಶ್ರೀ ಸಂಪಂಗಿ ಎನ್.(ಬಾಗೇಪಲ್ಲಿ): ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಕೈಗಾರಿಕಾ ನಗರವನ್ನು ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ; ಹಾಗಿದ್ದಲ್ಲಿ ಯಾವಾಗ ಇದು ಕಾರ್ಯರೂಪಕ್ಕೆ ಬರುತ್ತದೆ;

ಆ) ಈ ವಿಧಾನಸಭಾ ಕ್ಷೇತ್ರದಲ್ಲಿ ಕೈಗಾರಿಕಾ ಮಳಿಗೆಗಳನ್ನು ಇತ್ತೀಚಿನ ದಿನಗಳಲ್ಲಿ ನಿರ್ಮಿಸಲಾಗಿದೆಯೇ ಹಾಗಿದ್ದಲ್ಲಿ ಅವುಗಳು ಯಾವುವು;

ಅವುಗಳನ್ನು ಎಲ್ಲೆಲ್ಲಿ ಹಾಗೂ ಎಷ್ಟು ವೆಚ್ಚದಲ್ಲಿ ನಿರ್ಮಿಸಲಾಗಿದೆ? (ವಿವರ ನೀಡುವುದು).

ಶ್ರೀ ಎಸ್.ಆರ್.ಕಾಶಪ್ಪನವರ್ (ಸಣ್ಣ ಕೈಗಾರಿಕಾ ಸಚಿವರು):

ಅ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಕೈಗಾರಿಕಾ ನಗರವನ್ನು ಪ್ರಾರಂಭಿಸಲು ಯಾವ ಜಮೀನನ್ನು ಸ್ವಾಧೀನ ಪಡಿಸಿಕೊಂಡಿರುವುದಿಲ್ಲ.

ಆ) ಇತ್ತೀಚಿನ ದಿನಗಳಲ್ಲಿ ಬಾಗೇಪಲ್ಲಿ ಕ್ಷೇತ್ರದಲ್ಲಿ ಕೈಗಾರಿಕಾ ಮಳಿಗೆಗಳನ್ನು ನಿರ್ಮಿಸಲಾಗಿಲ್ಲ.

ಉದ್ಭವಿಸುವುದಿಲ್ಲ.

ಶ್ರೀ ಎನ್.ಸಂಪಂಗಿ: ಮಾನ್ಯ ಅಧ್ಯಕ್ಷರೇ, ನನ್ನ (ಅ) ಪ್ರಶ್ನೆಗೆ ಉತ್ತರದಲ್ಲಿ, ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಕೈಗಾರಿಕಾ ನಗರವನ್ನು ಸ್ಥಾಪಿಸಲು ಯಾವ ಜಮೀನನ್ನೂ ವಶಪಡಿಸಿಕೊಂಡಿಲ್ಲ ಎಂದು ತಿಳಿಸಿದ್ದಾರೆ. ಈಗ ನೀವು ಜಮೀನನ್ನು ಸ್ವಾಧೀನಪಡಿಸಿಕೊಂಡಿಲ್ಲ. ಕಳೆದ ಸಾರಿ ಇದೇ ಪ್ರಶ್ನೆಯನ್ನು ಕೇಳಿದಾಗ ಉದ್ಭವಿಸುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಹಾಗೆಂದರೆ ಕೈಗಾರಿಕಾ ನಗರವು ಉದ್ಭವ ಮೂರ್ತಿಗಳೇ? ಇವೊತ್ತು ಅಲ್ಲಿ ಕೈಗಾರಿಕಾ ನಗರವನ್ನು ಪ್ರಾರಂಭಿಸಿ ಎಂದು ನಾವು ನಿಮಗೆ ಪ್ರಶ್ನೆ ಮಾಡಿದ್ದೇನೆ, ಅಲ್ಲಿನ ವಿದ್ಯಾವಂತ ಯುವಕರು ಬೇರೆ ಕಡೆಗಳಿಗೆ ವಲಸೆ ಹೋಗುತ್ತಿದ್ದಾರೆ. ಅವರಿಗೆ ಅನುಕೂಲ ಮಾಡಿಕೊಡಿ ಎಂದು ನಮ್ಮ ಕಳಕಳಿಯನ್ನು ಪ್ರಶ್ನೆರೂಪದಲ್ಲಿ ಮಾಡಿದ್ದೇನೆ. ಉತ್ತರದಲ್ಲಿ ಉದ್ಭವಿಸುವುದಿಲ್ಲ ಎಂದು ಹೇಳುತ್ತೀರಿ. ನೀವು ಅಲ್ಲಿ ಕೈಗಾರಿಕಾ ನಗರವನ್ನು ಪ್ರಾರಂಭಿಸಲು ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬುದು ನನ್ನ ಪ್ರಶ್ನೆ. ಕಳೆದ ಸಾರಿ ಕೂಡ ಪ್ರಶ್ನೆ ಕೇಳಿದಾಗ ಉದ್ಭವವಾಗುವುದಿಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಇವೊತ್ತು ಜಮೀನನ್ನು ಸ್ವಾಧೀನ ಮಾಡಿಕೊಂಡಿಲ್ಲವೆಂದು ಹೇಳುತ್ತಾರೆ. ಇದೇ ರೀತಿಯ ಉತ್ತರವನ್ನು ಅಧಿಕಾರಿಗಳು ಕೊಟ್ಟುಕೊಂಡು ಬರುತ್ತಿದ್ದಾರೆ.

ಅಧ್ಯಕ್ಷರು: ಇನ್ನು ಮೇಲೆ ಅಂಥ ಉತ್ತರ ಕೊಡುವುದಿಲ್ಲ, ಅಲ್ಲಿ ಕೈಗಾರಿಕಾ ನಗರವನ್ನು ಪ್ರಾರಂಭ ಮಾಡಲು ಪ್ರಯತ್ನಿಸುತ್ತೇವೆ ಎಂದು ಹೇಳುತ್ತಿದ್ದಾರೆ.

ಶ್ರೀ ಎಸ್.ಆರ್.ಕಾಶಪ್ಪನವರ್: ಮಾನ್ಯ ಅಧ್ಯಕ್ಷರೇ, ಸರಕಾರದವರು ಒಂದೇ ವೇಳೆಗೆ ಎಲ್ಲಾ ಕಡೆಗಳಲ್ಲಿಯೂ ಕೈಗಾರಿಕಾ ವಸಾಹತುಗಳನ್ನು ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಅದನ್ನು ಎಲ್ಲೆಲ್ಲಿ ಅವಶ್ಯಕತೆಯಿದೆಯೆಂದು ನಾವು ಗ್ರಹಿಸುತ್ತೇವೆಯೋ ಅಲ್ಲಿಗೆ ನಾವು ಆದೇಶ ಮಾಡುತ್ತೇವೆ. ಆದೇಶ ಮಾಡಿದ ಮೇಲೆ ಅಲ್ಲಿ ಅವರು ಡಿಮಾಂಡ್ಸ್ ಸರ್ವೆಯನ್ನು ಮಾಡುತ್ತಾರೆ. ಹಾಗೆ ಸರ್ವೇ ಮಾಡಿದ ಸಂದರ್ಭದಲ್ಲಿ ಅಲ್ಲಿ ಕನಿಷ್ಟ ಹತ್ತು ಉದ್ದಿಮೆಗಳಾದರೂ ಪ್ರಾರಂಭಿಸಲು ಮುಂದೆ

ಬಂದಲ್ಲಿ ಅಲ್ಲಿ ಕೈಗಾರಿಕಾ ವಸಾಹತು ಸ್ಥಾಪನೆ ಮಾಡುವುದಕ್ಕೆ ಪ್ರಪೋಸಲ್ ಸರಕಾರಕ್ಕೆ ಬಂದು ಆಮೇಲೆ ಅಪ್ರೂವ್ ಮಾಡಿ ಮುಂದಿನ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ನಾವು ಉದ್ಘಾಟಿಸುವುದಿಲ್ಲ ಎಂದು ಪತಕ್ಕೆ ಉತ್ತರಿಸಿದ್ದೇವೆ ಅಂದರೆ ಅಲ್ಲಿ ಇಲ್ಲಿಯವರೆಗೆ ಅಂಥ ಪ್ರೊಪೋಸಲ್ಸ್ ಯಾವುದೂ ಇರಲಿಲ್ಲ ಮತ್ತು ಪ್ರತಿವರ್ಷವೂ ಇಂತಿಷ್ಟು ವಸಾಹತುಗಳನ್ನು ಸ್ಥಾಪನೆ ಮಾಡಬೇಕೆಂದು ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ಈ ವರ್ಷದಲ್ಲಿ ಅಲ್ಲಿ ಡಿಮಾಂಡ್ ಸರ್ವೆಯನ್ನು ಮಾಡಿಸುತ್ತೇವೆ ಎಂದು ತಮಗೆ ಸ್ಪಂದಿಸಿದ್ದೇನೆ. ಅಲ್ಲಿ ಕನಿಷ್ಟ ಉದ್ದಿಮೆಗಳು ಮುಂದೆ ಬಂದಲ್ಲಿ ಸರ್ವೆಯ ನಂತರ ಕೆಲಸವನ್ನು ಪ್ರಾರಂಭಿಸುತ್ತೇವೆ.

ಅಧ್ಯಕ್ಷರು: ಅವರು ಬಾಗೇಪಲ್ಲಿಯಲ್ಲಿ ಡಿಮಾಂಡ್ ಸರ್ವೆಯನ್ನು ಮಾಡಿಸುತ್ತೇವೆ ಎಂದು ಹೇಳಿದ್ದಾರೆ. ಕನಿಷ್ಟ ಕೈಗಾರಿಕೆಗಳು ಮುಂದೆ ಬಂದು ಅರ್ಜಿಗಳನ್ನು ಹಾಕಿದರೆ ಕೆಲಸವನ್ನು ಪ್ರಾರಂಭ ಮಾಡಿಸುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಎನ್.ಸಂಪಂಗಿ: ಅಲ್ಲಿ ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟಂಥ ಯಾವ ಅಧಿಕಾರಿಗಳೂ ಕೂಡ ಇಲ್ಲ. ಅಧಿಕಾರಿಗಳೇ ಇಲ್ಲದಿದ್ದರೆ ಕೈಗಾರಿಕೆಗಳು ಹೇಗೆ ಬರುತ್ತವೆ?

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೇ, ಇಲ್ಲಿ ಪ್ರಶ್ನೆ ಕೇಳುವ ಉದ್ದೇಶವು ನಮ್ಮ ಕ್ಷೇತ್ರಗಳಲ್ಲಿನ ಸಮಸ್ಯೆಗಳನ್ನು ನಿವಾರಣೆ ಮಾಡಿಕೊಳ್ಳುವುದಕ್ಕೆ. ಅದಕ್ಕೆ ಉತ್ತರ ಕೊಡುವುದರಲ್ಲಿ ಸಮಂಜಸವಾಗಿಲ್ಲದಿದ್ದರೆ ಸಮಸ್ಯೆ ನಿವಾರಣೆಯಾಗುವುದಿಲ್ಲ.

ಅಧ್ಯಕ್ಷರು: ಸಚಿವರುಗಳು ಇದೇ ರೀತಿಯಲ್ಲಿ ಉತ್ತರ ಕೊಡಬೇಕೆಂದು ನಾನು ಆರ್ಡರ್ ಮಾಡುವುದಕ್ಕಾಗುವುದಿಲ್ಲ. ಮಾನ್ಯ ಸಂಪಂಗಿಯವರ ಪ್ರಶ್ನೆಗೆ ಸೂಕ್ತ ಉತ್ತರ ಕೊಟ್ಟಿದ್ದಾರೆ... ಡಿಮಾಂಡ್ ಸರ್ವೆ ಮಾಡಿಸುತ್ತಾರೆಂದು ಹೇಳಿದ್ದಾರೆ. ತಾವುಗಳೂ ಕೂಡ ಅರ್ಥ ಮಾಡಿಕೊಳ್ಳಬೇಕು. ದಯವಿಟ್ಟು ಕೇಳಿ, ಅವರು ಡಿಮಾಂಡ್ ಸರ್ವೆ ಮಾಡಿಸುತ್ತೇವೆಂದು ಹೇಳಿದ್ದಾರೆ

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಹೋದವರ್ಷವೂ ಅದೇ ಉತ್ತರ ಹೇಳಿದ್ದರು, ಪ್ರತಿವರ್ಷ ಪ್ರಶ್ನೆ ಕೇಳಿದಾಗಲೂ ಹೀಗೇ ಹೇಳಿದರೆ ಹೇಗೆ? 12 ಅಡಿ ಹತ್ತುವುದು, 8 ಅಡಿ ಜಾರುವುದಾ?

ಅಧ್ಯಕ್ಷರು: ನೀವು ಕುಳಿತುಕೊಳ್ಳಿ.

ಶ್ರೀ ಎಸ್.ಎಂ.ಕೃಷ್ಣ(ಮುಖ್ಯಮಂತ್ರಿಗಳು): ಅಧ್ಯಕ್ಷರೆ, ಈಗಾಗಲೇ ಸಣ್ಣ ಕೈಗಾರಿಕೆಗಳು ಡೋಲಾಯಮಾನ ಪರಿಸ್ಥಿತಿ ಎದುರಿಸುತ್ತಿವೆ. ಒಂದು ಕಾಲದಲ್ಲಿ ಸಣ್ಣ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕೆಂಬ ದೃಷ್ಟಿಯಿಂದ ಕೈಗಾರಿಕಾ ಎಸ್ಟೇಟ್

ಮಾಡಬೇಕೆಂಬ ಚಿಂತನೆಗೆ ನಾವು ಚಾಲನೆ ಕೊಟ್ಟಿವು. ಆದರೆ ಈಗ ಪರಿಸ್ಥಿತಿಯನ್ನು ಅವಲಂಬಿಸಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ಸಂಪನ್ಮೂಲಗಳು ಬಹಳ ಸೀಮಿತವಾಗಿವೆ. ಆದ್ದರಿಂದ ಮಾನ್ಯ ಸಚಿವರು ಹೇಳಿದಂತಹ ಪ್ರತಿ ಶಬ್ದವನ್ನೂ ಎಂಡಾರ್ಸ್ ಮಾಡಲು ನಾನು ನಿಂತಿದ್ದೇನೆ. ಡಿಮಾಂಡ್ ಸರ್ವೆ ಮಾಡದೆಯೇ ಅಲ್ಲೊಬ್ಬ ಅಧಿಕಾರಿಯನ್ನು ಪೋಸ್ಟ್ ಮಾಡಿ, ಅಲ್ಲಿ ಕೈಗಾರಿಕಾ ಎಸ್ಟೇಟ್ ಮಾಡಿ ಅಂದರೆ ಅಂತಹ ಸಂಪನ್ಮೂಲ ನಮ್ಮಲ್ಲಿಲ್ಲ. ಖಾಸಗಿ ಕ್ಷೇತ್ರದಲ್ಲಿ ಡಿಮಾಂಡನ್ನು ಜನರೇಟ್ ಮಾಡಿದರೆ ಅದಕ್ಕೆ ಸ್ಪಂದಿಸಲಿಕ್ಕೆ ಸರ್ಕಾರದ ಸಣ್ಣ ಕೈಗಾರಿಕೆಗಳ ನಿಗಮವಿದೆ. ಏಕಾಯೇಕಿ ನೀವು ಇಂಡಸ್ಟ್ರೀಯಲ್ ಎಸ್ಟೇಟ್ ಕೇಳಿದರೆ ಖಂಡಿತವಾಗಿ ಕೊಡಲಿಕ್ಕೆ ಸಾಧ್ಯವಿಲ್ಲವೆಂಬ ನಿತ್ಯಸತ್ಯವನ್ನು ಮಾನ್ಯ ಸದಸ್ಯರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎನ್.ಸಂಪಂಗಿ: ಇನ್ನೊಂದು ಪ್ರಶ್ನೆ ಇದೆ. 'ಆ' ಪ್ರಶ್ನೆಗೆ ಇಲ್ಲ ಎಂದಿದ್ದಾರೆ, ಆದರೆ ವಿಶ್ವ ಯೋಜನೆಯಡಿ 9 ಶೆಡ್‌ಗಳನ್ನು ನಮ್ಮ ವಿಧಾನಸಭಾ ಕ್ಷೇತ್ರದಲ್ಲಿ ನಿರ್ಮಿಸಿದ್ದರು. ಆ ಕಟ್ಟಡಗಳ ಬಾಗಿಲು ಜಿಂಕ್‌ಶೀಟ್‌ಗಳನ್ನು ಯಾರೋ ಕಿತ್ತು ಒಯ್ದಿದ್ದಾರೆ. ಇವತ್ತಿಗೂ ಅಧಿಕಾರಿಗಳು ಯಾರೂ ಹೋಗಿ ನೋಡಲಿಲ್ಲ. ಅವನ್ನು ರಕ್ಷಿಸುವ ಕೆಲಸ ಸರ್ಕಾರದ್ದಲ್ಲವೇ?

ಶ್ರೀ ಎಸ್ ಆರ್ ಕಾಶಪ್ಪನವರ್: ಕೆಎಸ್‌ಐಐಡಿಸಿ ಮೂಲಕ ಅಲ್ಲಿ ಕೈಗಾರಿಕಾ ಮಳಿಗೆ ಸ್ಥಾಪಿಸಿಲ್ಲ. ವಿಶ್ವ ಮಳಿಗೆಗಳ ಬಗ್ಗೆ ನನ್ನ ಗಮನ ಸೆಳೆದಿದ್ದೀರಿ, ನಾನು ತಕ್ಷಣ ಗಮನಹರಿಸಿ ಸೂಕ್ತಕ್ರಮ ಕೈಗೊಳ್ಳುತ್ತೇನೆ.

ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕೈಗಾರಿಕೆಗಳ ಅಭಿವೃದ್ಧಿ.

223(2479)

ಶ್ರೀ ಜಿ.ಎನ್.ನಂಜುಂಡಸ್ವಾಮಿ(ಕೊಳ್ಳೇಗಾಲ): ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲ ತಾಲ್ಲೂಕಿನ ಕೈಗಾರಿಕೆಗಳ ಅಭಿವೃದ್ಧಿಗೆ ಹೊಸ ಕೈಗಾರಿಕೆಗಳ ಸ್ಥಾಪನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?

ಆ) ಕೊಳ್ಳೇಗಾಲ ತಾಲ್ಲೂಕಿನಲ್ಲಿನ ಕೈಗಾರಿಕೆಗಳ ಅಭಿವೃದ್ಧಿಗೆ ಕೆ.ಎಸ್.ಎಸ್.ಐ.ಡಿ.ಸಿ. ಇವರ ಈವರೆಗಿನ ಪಾತ್ರವೇನು?

ಶ್ರೀ ಎಸ್.ಆರ್.ಕಾಶಪ್ಪನವರ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):